# ಇಷ್ಟಪಟ್ಟು ನಟಿಯಾದೆ

## ದೀಪಿಕಾ ವೆಂಕಟೇಶ್
### ಉದಯದ 'ಜೀವನದಿ'ಯ ಜ್ಯೋತಿ

★ *ಜೀವನದಿಯ ಪಾತ್ರ ಹೇಗಿದೆ?*
ಕಥೆ ತುಂಬಾ ಚೆನ್ನಾಗಿದೆ. ಪ್ರೇಕ್ಷಕರ ಪ್ರತಿಸ್ಪಂದನಕ್ಕೆ ತಕ್ಕಂತೆ ಕಥೆ ಬದಲಾಗುವುದಿಲ್ಲ. ಸರಸ್ವತಿ ನಟರಾಜನ್ ಅವರ 'ಜ್ಯೋತಿ' ಕಾದಂಬರಿ ಆಧಾರಿತ ಧಾರಾವಾಹಿ. ಜನರು ಮತ್ತಿನ್ನೇನೋ ನಿರೀಕ್ಷಿಸುತ್ತಿದ್ದಾರೆ ಎಂದು ದಿಕ್ಕು ತಪ್ಪಿಸುವ ಪ್ರಮೇಯ ಇಲ್ಲಿ ಇಲ್ಲ. ನನಗೆ ಪ್ರಧಾನ ಪಾತ್ರ ಸಿಕ್ಕಿರುವುದು ಅದೃಷ್ಟ ಎಂದೇ ಭಾವಿಸಿದ್ದೇನೆ. ಏಕೆಂದರೆ ಇದಕ್ಕೆ ಹಲವು ಸವಾಲಿನ ಆಯಾಮಗಳಿವೆ. ನಾನು ಒಂದು ಪಾತ್ರವಾಗಿ ಹಲವು ಸ್ಥರದಲ್ಲಿ ಕಾಣಿಸಿಕೊಳ್ಳಬೇಕಿದೆ. ಕಾಲೇಜಿನ ಹುಡುಗಿಯಾಗಿದ್ದಾಗ ಆ ವಯೋಮಾನದ ರಮ್ಯತೆಯನ್ನು ಪ್ರತಿನಿಧಿಸುತ್ತೇನೆ. ಅದು ಮುಗಿಯುವಷ್ಟರಲ್ಲಿ ದಾಂಪತ್ಯ. ಅದರ ದುರಂತ ಕಥೆಯ ವಿವರದ ಜೊತೆಗೆ ಛಲದಿಂದ ಬದುಕನ್ನು ಕಟ್ಟಿಕೊಳ್ಳುವ ಸವಾಲುಗಳು ಒಂದೇ.. ಎರಡೇ. ಆಟೋ ಚಾಲಕಿಯಾಗಿದ್ದವಳು ಲಾಯರ್ ವೃತ್ತಿ ಕೈಗೊಳ್ಳುತ್ತೇನೆ. ಇಂತಹ ಭಿನ್ನ ಕ್ರಿಯೆಯನ್ನು ಒಂದೇ ಪಾತ್ರದಲ್ಲಿ ನಿರ್ವಹಿಸುವ ಅವಕಾಶ ಸಿಕ್ಕಿದ್ದು ಅದೃಷ್ಟ ಅದಕ್ಕೆ ಕೃತಜ್ಞತೆ ಹೇಳುತ್ತೇನೆ.

★ *ನಟನೆ ಬಗ್ಗೆ ನಿಮ್ಮ ಎಂಟೆಕ್ ಸಹಪಾಠಿಗಳು ಏನು ಹೇಳುತ್ತಾರೆ?*
ಕೆಲವರು ಕಂಪೆನಿಯಲ್ಲಿ ಕೆಲಸಕ್ಕೆ ಸೇರಿದ್ದಾರೆ. ಇನ್ನೂ ಕೆಲವರು ಅಧ್ಯಾಪಕರಾಗಿದ್ದಾರೆ. ನನಗೂ ಅಂತಹ ಅವಕಾಶ ಇದ್ದರೂ ಅಭಿನಯವನ್ನು ಒಪ್ಪಿ ಅಪ್ಪಿದ್ದೇನೆ. ಇದು ನಮ್ಮ ಸ್ನೇಹ ಬಳಗಕ್ಕೂ ಇಷ್ಟ. ನನ್ನಿಷ್ಟದ ವೃತ್ತಿಯನ್ನು ಖುಷಿಯಿಂದ ಮಾಡುತ್ತೇನೆ. ಇಲ್ಲಿ ಒತ್ತಡ ಎನ್ನುವುದು ಇಲ್ಲ. ಜೊತೆಗೆ ಏಕತಾನತೆಯೂ ಕಾಡುವುದಿಲ್ಲ. ಆದರೆ ನನ್ನ ಸ್ನೇಹಿತರು ಸಿಕ್ಕಾಪಟ್ಟೆ ಕಷ್ಟಪಡುತ್ತಾರೆ. ಕೆಲಸದ ಸಮಸ್ಯೆಯಲ್ಲಿ ಕಳೆದು ಹೋಗುತ್ತಿದ್ದಾರೆ. ಅದಕ್ಕೆ ಅವರೆಲ್ಲ ನೀನಾದರೂ ಖುಷಿಯಾದ ನಿನ್ನಿಷ್ಟ ಕೆಲಸ ಮಾಡುತ್ತಿದ್ದೀಯಲ್ಲಾ ಎಂದು ಪ್ರೋತ್ಸಾಹಿಸುತ್ತಾರೆ.
ಆದರೆ ನನ್ನ ಕೆಲ ಸಹನಟರು ಮಾತ್ರ ಉನ್ನತ ಪದವಿ ಇಟ್ಟುಕೊಂಡು ಏಕೆ ಇಲ್ಲಿಗೆ ಬಂದೆ? ನಿನ್ನ ಅರ್ಹತೆಗೆ ಸಾಕಷ್ಟು ಅವಕಾಶಗಳು ಇವೆಯಲ್ಲ ಎಂದು ಪ್ರಶ್ನಿಸಿದ್ದರು. ನನಗೆ ಸಂತೋಷ ಇಲ್ಲಿದೆ. ಹಾಗಾಗಿ ಇಲ್ಲಿಯೇ ಮುಂದುವರಿಯುತ್ತೇನೆ.



★ *ಅಭಿನಯವನ್ನು ರೂಢಿಸಿಕೊಂಡಿದ್ದು ಹೇಗೆ?*
ನಟನೆಗೆಂದು ಯಾವ ತರಗತಿಗೂ ಹೋಗಿಲ್ಲ. ಓದಿನ ದಿನಗಳಲ್ಲಿ ತಪ್ಪದೇ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೆ. ಮೂರು ವರ್ಷದ ಹಿಂದೆ ಓದು ಮುಗಿದಿತ್ತು. ಟಿವಿಗೆ ನೋಡೋಣ ಅಂತ ಪ್ರಯತ್ನ ಮಾಡಿದೆ. 'ಜೊತೆ ಜೊತೆಯಲಿ'ಯಲ್ಲಿ ಮೊದಲ ಅವಕಾಶ ಸಿಕ್ಕಿತು. ಅದಾದ ಮೇಲೆ ಒಂದಾದ ಮೇಲೆ ಒಂದರಂತೆ ಅವಕಾಶಗಳು ಸಿಕ್ಕಿವೆ. ಅಳುಮುಂಜಿ, ನೆಗೆಟಿವ್ ಪಾತ್ರಗಳು ಸೇರಿದಂತೆ ಬೇರೆ ಬೇರೆ ಪಾತ್ರಗಳನ್ನು ನಿರ್ವಹಿಸಿದ್ದೇನೆ. ಆಮೂಲಕ ಅಭಿನಯವನ್ನು ಕಲಿಯುತ್ತಾ ಬಂದಿದ್ದೇನೆ.

★ *ಸಿನಿಮಾಕ್ಕೆ ಇನ್ನೂ ಯಾಕೆ ಹೋಗಿಲ್ಲ?*
ಸಿನಿಮಾಕ್ಕೆ ಹಲವು ಅವಕಾಶಗಳು ಬಂದಿವೆ. ಬಂದ ಅವಕಾಶಗಳನ್ನೆಲ್ಲಾ ಒಪ್ಪಲೂ ಆಗುವುದಿಲ್ಲ. ನನಗೆ ಕಥೆ ಮುಖ್ಯ. ಬಹುತೇಕ ಸಿನಿಮಾಗಳಲ್ಲಿ ಡಾನ್ಸ್ ಮಾಡುವುದು ನಾಯಕನ ಜೊತೆ ಪ್ರೀತಿ ಮಾಡಿ ಸುತ್ತಾಡುವುದಕ್ಕೆ ಸೀಮಿತವಾಗುತ್ತವೆ. ನನಗೆ ಮಹಿಳಾಪರವಾದ ಚಿಂತನೆ ಇರಬೇಕು. ಇಲ್ಲವೇ ಪೌರಾಣಿಕ ಹಿನ್ನೆಲೆಯ ಕಥೆ ಇರಬೇಕು. ಬಹುತೇಕ ಸಿನಿಮಾಗಳು ಹಿರೋಯಿಸಂಗೆ ಪ್ರದರ್ಶಿಸುತ್ತವೆ. ಅಂತಹ ಕಥೆ ನನಗೆ ಇಷ್ಟ ಆಗುವುದಿಲ್ಲ. 'ಅರುಂಧತಿ'ಯಲ್ಲಿ ಅನುಷ್ಕಾ ನಟನೆಯನ್ನು ತುಂಬಾ ಇಷ್ಟಪಡುತ್ತೇನೆ. ಅಂತಹ ಪಾತ್ರ ಮಾದರಿ, ಅಂತಹ ಅವಕಾಶಕ್ಕೆ ಕಾಯುತ್ತೇನೆ.

★ *ನಿಮ್ಮ ವೃತ್ತಿ ಬದುಕಿನ ಬಗ್ಗೆ ಮನೆಯವರು ಏನು ಹೇಳುತ್ತಾರೆ?*
ಅಪ್ಪ ವೆಂಕಟೇಶ್ ಅವರಿಗೆ ನಾನು ಶೈಕ್ಷಣಿಕ ಕ್ಷೇತ್ರದಲ್ಲಿ ಕೆಲಸ ಮಾಡಬೇಕು ಎಂದು ಬಯಸುತ್ತಾರೆ. ಅಮ್ಮ ಶಾಂತಕುಮಾರಿ ಸಂಪೂರ್ಣ ಬೆಂಬಲಿಸುತ್ತಾರೆ. ಅಣ್ಣ ಕಾರ್ತಿಕ್ ನಟ. ಅವರು ಸಾಫ್ಟ್‌ವೇರ್ ಕಂಪೆನಿಯಲ್ಲಿ ಕೆಲವು ವರ್ಷ ಕೆಲಸ ಮಾಡಿ ನಟಿಸುತ್ತಿದ್ದಾರೆ. ಈಗ 'ಅವಳು' ಧಾರಾವಾಹಿಯಲ್ಲಿ ಮುಖ್ಯ ಪಾತ್ರ ನಿರ್ವಹಿಸುತ್ತಿದ್ದಾರೆ. ನಾನೂ ಇಲ್ಲಿಗೆ ಬರಲು ಅವರ ಬೆಂಬಲ ಕಾರಣ.

★ *ಪ್ರೀತಿ– ಪ್ರೇಮ ಮದುವೆ?*
ಇನ್ನೂ ಮೂರು ವರ್ಷ ಆಗಲ್ಲ. ಪ್ರೀತಿ ಮಾಡಲು ನನಗೆ ಸಮಯವೇ ಇರಲಿಲ್ಲ. ಓದು, ಪಠ್ಯೇತರ ಹವ್ಯಾಸದಲ್ಲಿ ಕಾಲೇಜು ದಿನಗಳು ಕಳೆದವು. ಗಂಡಿನ ಆಯ್ಕೆಯನ್ನು ನಮ್ಮ ಪೋಷಕರ ಪಾಲಿಗೆ ಬಿಟ್ಟಿದ್ದೇನೆ. ಪ್ರೀತಿ ಅಂತ ಸುತ್ತಿಲ್ಲ. ತುಂಬಾ ಸ್ನೇಹಿತರಿದ್ದಾರೆ.

■ ರಾಗು